## ಜಿಪುಣಾಗ್ರೇಸರರು



ಪರಮೇಶಿ ಜಿಪುಣಾತಿ ಜಿಪುಣ. ಅವನು ಶೀಲಾಳನ್ನು ಪ್ರೀತಿಸುತ್ತಿದ್ದ. ಅಂದು ಶೀಲಾ ಹೇಳಿದಳು, 'ನಾಳೆ ಬೆಳಿಗ್ಗೆ ನಮ್ಮ ಮನೆಯ ಹತ್ತಿರ ಬಾ. ಅಪ್ಪ ಮಲಗಿದ ಮೇಲೆ ನಾನು ಒಂದು ರೂಪಾಯಿ ಕಾಯಿನ್ ಕೆಳಗೆಸೆಯುವೆ. ಅದರ ಶಬ್ದ ಕೇಳಿ ಮೇಲೆ ಬಾ' ಎಂದು. ಮರುದಿನ ಶೀಲಾ ಹೇಳಿದಂತೆ ಬೆಳಿಗ್ಗೆ ಬೇಗ ಬಂದು ಕಾಯುತ್ತಿದ್ದ ಪರಮೇಶಿ. ಶೀಲಾ ಕಾಯಿನ್ ಹಾಕಿ ಅರ್ಧತಾಸಿನ ನಂತರ ಮೇಲೆ ಹೋದ. ಶೀಲಾ, 'ಯಾಕಿಷ್ಟು ಲೇಟು ಮಾಡಿದೆ?' ಎಂದಳು. 'ನೀನು ಕೆಳಗೆ ಎಸೆದ ಕಾಯಿನ್ ಹುಡುಕುತ್ತಿದ್ದೆ ಕಣೆ' ಎಂದ ಪರಮೇಶಿ. ಶೀಲಾ ನಗುತ್ತಾ ಹೇಳಿದಳು, 'ಅಯ್ಯೋ, ಪೆದ್ದ... ನಾನು ಕಾಯಿನ್‌ಗೆ ದಾರಕಟ್ಟಿ, ಕೆಳಗೆ ಎಸೆದು, ಕೂಡಲೇ ಮೇಲೆಳೆದುಕೊಂಡೆ' ಎಂದಳು. ಪರಮೇಶಿ ಗರಬಡಿದವನಂತಾದ.

**ಮಂಡ್ಯ ಮ.ನಾ., ಉಡುಪ**

---

## ರೂಢಿ ಆಗೋಗುತ್ತೆ...



ಕಲೆ: ಗಣೇಶ ಆಚಾರ್ಯ

ನಂಜಮ್ಮ ಹೊಸದಾಗಿ ಮನೆ ಕೆಲಸಕ್ಕೆ ಸೇರಿದಳು. ನವದಂಪತಿ ಇಬ್ಬರೆ ಇದ್ದ ಮನೆಯದು. ಒಂಬತ್ತು ಗಂಟೆಗೆ ಗಂಡಹೆಂಡತಿ ಇಬ್ಬರೂ ಕೆಲಸಕ್ಕೆ ಹೊರಟುಬಿಡುತ್ತಿದ್ದರು. ಆ ವೇಳೆಗಾಗಲೆ ಇಬ್ಬರ ನಡುವೆ ಒಂದೆರಡು ವಾಗ್ವಾದಗಳು ನಡೆದು ಹೋಗುತ್ತಿದ್ದವು. ಒಂದು ದಿನ ವಾಗ್ವಾದ ತಾರಕಕ್ಕೇರಿ ಗಂಡ ಕೆಲಸಕ್ಕೆ ಹೋಗಿದ್ದ, ಹೆಂಡತಿ ಮುನಿಸಿಕೊಂಡು ತವರಿಗೆ ಹೊರಡಲು ಅಣಿಯಾಗಿದ್ದಳು. ನಂಜಮ್ಮನಿಗೆ ನಡೆದ ಗಲಾಟೆಯನ್ನು ಕಣ್ಣಲ್ಲಿ ನೀರು ಹರಿಸಿಕೊಂಡು ಹೇಳಿದಳು. ಅದಕ್ಕೆ ನಂಜಮ್ಮ, 'ಒಂದು ಗುಟ್ಟು ಹೇಳ್ತೀನಿ ಕೇಳಿ... ಒಂದ್ವರ್ಸ ಹಾಗೂ ಹೀಗೂ ತಳ್ಳಿ' ಎಂದಳು. ಆಕೆ, 'ಆಮೇಲೆ' ಎಂದು ಕೇಳಿದಳು. ನಂಜಮ್ಮ, 'ಆಮ್ಯಾಕೆ ಅದೇ ರೂಢಿ ಆಗೋಗುತ್ತೆ ಅಷ್ಟೇ' ಎಂದಳು.

**ಮಲ್ಲಿಕಾರ್ಜುನ ಸುರಧೇನುಪುರ**